No. of Printed Pages : **6**

6104

Register Number | | | | | | | |

Language — Part I — KANNADA

Time Allowed : 3.00 Hours] [Maximum Marks : 100

ಸೂಚನೆಗಳು : (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿರಿ.

(2) ಉತ್ತರವನ್ನು ಬರೆಯಲು **ಕಪ್ಪು** ಅಥವಾ **ನೀಲಿ** ಶಾಯಿಯನ್ನು ಉಪಯೋಗಿಸಿರಿ.

ಭಾಗ - I

(15 ಅಂಕಗಳು)

ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **15x1=15**

Choose and write the **correct** answer.

1. ಗುರುವನ್ನು – ಈ ಪದದಲ್ಲಿನ ವಿಭಕ್ತಿ ಪ್ರತ್ಯಯ _____.

(ಅ) ಪ್ರಥಮ (ಆ) ದ್ವಿತೀಯ (ಇ) ತೃತೀಯ (ಈ) ಪಂಚಮಿ

2. ಹೆಬ್ಬಾಗಿಲು – ಈ ಪದದಲ್ಲಿನ ಸಮಾಸ _____.

(ಅ) ಕರ್ಮಧಾರಯ ಸಮಾಸ (ಆ) ತತ್ಪುರುಷ ಸಮಾಸ

(ಇ) ದ್ವಿಗು ಸಮಾಸ (ಈ) ಕ್ರೀಯಾ ಸಮಾಸ

3. ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ಹೇಳುವುದಕ್ಕೆ _____ ಎಂದು ಹೆಸರು.

(ಅ) ಅರ್ಥಾಲಂಕಾರ (ಆ) ಉಪಮಾಲಂಕಾರ (ಇ) ರೂಪಕ ಅಲಂಕಾರ (ಈ) ಶ್ಲೇಷಾಲಂಕಾರ

4. ಕೆರೆಯನ್ನು ಇದು _____ ಸಂಧಿಗೆ ಉದಾಹರಣೆಯಾಗಿದೆ.

(ಅ) ಆಗಮ ಸಂಧಿ (ಆ) ಆದೇಶ ಸಂಧಿ (ಇ) ಲೋಪ ಸಂಧಿ (ಈ) ಗುಣ ಸಂಧಿ

5. ಛಂದಸ್ಸು ಎಂದರೆ _____ ನಿಯಮಗಳನ್ನು ತಿಳಿಸುವ ಶಾಸ್ತ್ರವಾಗಿದೆ.

(ಅ) ಪದ್ಯದ (ಆ) ಗದ್ಯದ (ಇ) ಅಲಂಕಾರದ (ಈ) ಸಂಸ್ಕೃತದ

docs.aglasem.com

aglasem.com

6. ಶೃಂಗಾರ ಪದದ ತದ್ಭವ ರೂಪ _____.

(ಅ) ಸಿಂಗಾರ (ಆ) ಶೃಂಗಾರ (ಇ) ಸರಿಗಾರ (ಈ) ಶರಗಾರ

7. ಸಿದ್ಧರಾಮನಿಗೆ ಶಿವನು ಮೊದಲು ದರ್ಶನ ಕೊಟ್ಟ ಸ್ಥಳ _____.

(ಅ) ಶ್ರೀಶೈಲ (ಆ) ನವಣೆಯ ಹೊಲ (ಇ) ರುದ್ರಗಮ್ಮರಿ (ಈ) ಅರಣ್ಯ

8. ಪಾಂಚಾಲೆ ಎಂದರೆ _____.

(ಅ) ದ್ರೌಪದಿ (ಆ) ಸೀತೆ (ಇ) ಅಹಲ್ಯ (ಈ) ಕೌಶಲ್ಯ

9. "ಪಣಿ" – ಪದದ ಅರ್ಥ _____.

(ಅ) ತ್ರಿಶೂಲ (ಆ) ಹಾವು (ಇ) ವೃಷಭ (ಈ) ಹುಲಿ

10. ರಾಘವಾಂಕನ ಕಾಲ ಕ್ರಿ.ಶ. _____.

(ಅ) ಕ್ರಿ.ಶ. 1165 (ಆ) ಕ್ರಿ.ಶ. 1150 (ಇ) ಕ್ರಿ.ಶ. 1250 (ಈ) ಕ್ರಿ.ಶ. 1350

11. ಭ್ರಮರ – ಈ ಪದದಲ್ಲಿನ ಸಮಾನಾರ್ಥಕ ಪದ _____.

(ಅ) ದುಂಬಿ (ಆ) ಚಿಟ್ಟೆ (ಇ) ಪತಂಗ (ಈ) ಉರಗ

12. ವ್ಯಾಸಂಗದ ಹವ್ಯಾಸ ಎಂಬ ಗದ್ಯದ ಕರ್ತೃ _____.

(ಅ) ಸಿ.ಪಿ.ಕೆ. (ಆ) ಡಿ.ಎಲ್. ನರಸಿಂಹಾಚಾರ್

(ಇ) ರಾ. ಗೋಪಾಲರೆಡ್ಡಿ (ಈ) ಬಸವರಾಜ ಕಟ್ಟೀಮಣಿ

13. ಇದು ಒಂದು ರೂಢನಾಮಕ್ಕೆ ಉದಾಹರಣೆಯಾಗಿದೆ.

(ಅ) ಪರ್ವತ (ಆ) ಕುಂಟ (ಇ) ಚಾಲಕ (ಈ) ರಾಮ

14. ನರಕ – ಈ ಪದದ ವಿರುದ್ಧಾರ್ಥ _____.

(ಅ) ನಾಕ (ಆ) ಭೂಲೋಕ (ಇ) ಪಾತಾಳ ಲೋಕ (ಈ) ಆಕಾಶ

15. "ಉಭಯ ಕವಿ ಕಮಲ ರವಿ" ಮತ್ತು "ಕವಿ ಶರಭ ಭೇರುಂಡ" ಎಂಬ ಬಿರುದುಗಳನ್ನು ಪಡೆದ ಕವಿ _____.

(ಅ) ರಾಘವಾಂಕ (ಆ) ಡಿ.ಎಲ್. ನರಸಿಂಹಾಚಾರ್

(ಇ) ಬಸವರಾಜ ಕಟ್ಟೀಮಣಿ (ಈ) ಸಿ.ಪಿ.ಕೆ.

docs.aglasem.com

aglasem.com

ಭಾಗ - II

(18 ಅಂಕಗಳು)

ವಿಭಾಗ - 1

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಉತ್ತರಿಸಿರಿ. **4x2=8**
Answer **any four** questions.

16. ಸ್ವಾಭಿಮಾನ ಎಂದರೇನು ?

17. ಭಾರತದ ರಾಷ್ಟ್ರೀಯ ಹಬ್ಬಗಳು ಯಾವುವು ?

18. ಪುಲಿಗೆರೆಯ ಸೋಮೇಶ್ವರನು ಹೇಳಿದ ಮಾತುಗಳೇನು ?

19. ಅಭಯರುಚಿಯು ರಾಜನನ್ನು ಏನೆಂದು ಹರಸಿದರು ?

20. ಬಸವಣ್ಣನವರ ದೃಷ್ಟಿಯಲ್ಲಿ ಧರ್ಮ ಎಂದರೇನು ?

21. ರಾಮಬಾಣ, ಗಧಾ ಪ್ರಹಾರ – ಈ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿರಿ.

ವಿಭಾಗ - 2

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ಐದಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿ. **5x2=10**
Answer **any five** questions briefly.

22. ಕೃಷ್ಣನು ಭೀಮನಿಗೆ ಹೇಗೆ ಸೂಚನೆ ಕೊಟ್ಟನು ?

23. ಸಿದ್ಧರಾಮನ ಪ್ರಲಾಪಕ್ಕೆ ಮರಗಿಡಗಳು ಯಾವ ರೀತಿ ಪ್ರತಿಕ್ರೀಯೆ ನೀಡಿದವು ?

24. ಭ್ರಾಂತಿಯೆಂಬ ತಾಯಿಯು ತೊಟ್ಟಿಲೊಳಗೆ ಏನನ್ನು ಮಲಗಿಸಿ ಜೋಗುಳವಾಡುತ್ತಿದ್ದಾಳೆ ?

25. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು ?

26. ಯುವ ಜನರಿಗೆ ಕವಿ ನೀಡುವ ಕರೆ ಯಾವುದು ?

27. ಅವನೂರು, ಕಂಬನಿ – ಈ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.

28. ಒಗ್ಗಟ್ಟು, ಕಣ್ಣೆರೆ – ಈ ಪದಗಳನ್ನು ಬಿಡಿಸಿ ಸಮಾಸವನ್ನು ಹೆಸರಿಸಿ.

docs.aglasem.com

aglasem.com

ಭಾಗ - III

(18 ಅಂಕಗಳು)

ಕೊಟ್ಟಿರುವ ಪ್ರಶ್ನೆಗಳಲ್ಲಿ ಪ್ರತಿ ವಿಭಾಗದಿಂದ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿರಿ. (**34** ನೇ ಪ್ರಶ್ನೆ **ಕಡ್ಡಾಯ**).

Answer **any two** questions from each section. (Question No. **34** is **compulsory**).

ವಿಭಾಗ - 1 **2x3=6**

29. ದೇವಾಲಯಗಳ ನಿರ್ಮಾಣದ ಬಗೆಗೆ ಬಸವಣ್ಣನವರ ವಿಚಾರಗಳಾವುವು ?

30. ನಡು ವಯಸ್ಸಿನ ಮಹಿಳೆಯನ್ನು ಕಂಡಾಗ ಹುಡುಗನ ಮನಸ್ಸಿನಲ್ಲಿ ಮೂಡಿದ ಭಾವನೆಗಳಾವುವು ?

31. ಅಮೃತಮತಿಯ ಮನಸ್ಸು ಕದಡಲು ಕಾರಣವಾದ ಘಟನೆಯನ್ನು ಬರೆಯಿರಿ.

ವಿಭಾಗ - 2 **2x3=6**

32. ಯುವ ಜನಾಂಗವು ಮುಂದೆ ಬಂದರೆ ಯಾರನ್ನು ನಾವು ಈ ಭೂಮಿಗೆ ಎಳೆದು ತರಬಹುದು ?

33. ಮಾನವೀಯತೆಯ ಬಗೆಗೆ ಕವಿ ಹೇಳುವ ವಿಚಾರಗಳೇನು ?

34. ಈ ಪದ್ಯಭಾಗವನ್ನು ಪೂರ್ತಿಗೊಳಿಸಿರಿ.

Quote from memory.

(ಅ) ಗುರು ಕಾರುಣ್ಯವೆ.....ಕೂಡಲಸಂಗಮದೇವಾ॥

ಅಥವಾ

(ಆ) ಹೇಮಂತ ಋತು ರಾಜನಿಳೆಗೆ.....ಮಾರುತನಿಲ್ಲ॥

ವಿಭಾಗ - 3 **2x3=6**

35. ಸಂಧಿ ಎಂದರೇನು ? ಸಂಧಿಗಳಲ್ಲಿ ಎಷ್ಟು ವಿಧ ? ಅವು ಯಾವುವು ?

36. ಕರ್ಮಧಾರಯ ಸಮಾಸ ಎಂದರೇನು ? ಉದಾಹರಣೆ ಕೊಡಿ.

37. ಮೆರೆಯುತಿದ್ದ ಭಾಗ್ಯವೆಲ್ಲ
ಹಜೆದು ಹೋಯಿತೆನುತ ತಿರುಕ
ಮರಳಿ ನಾಚಿ ಪೋಗುತಿದ್ದ ಮರಳನಂತೆಯೇ॥
– ಈ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿರಿ.

docs.aglasem.com

aglasem.com

TN SSLC 2022 Question Paper

ಭಾಗ - IV

(25 ಅಂಕಗಳು)

ಕೊಟ್ಟಿರುವ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿರಿ. **5x5=25**

Answer **all** the questions.

38. (ಅ) ಅಜ್ಜ ಮತ್ತು ಬೂಟ್ ಪಾಲಿಶ್ ಹುಡುಗನ ಸಂಬಂಧವನ್ನು ವಿವರಿಸಿ.

ಅಥವಾ

(ಆ) ಭಾರತೀಯ ಸಾಹಿತ್ಯದ ಬಗ್ಗೆ ವಿವರಿಸಿ.

39. (ಅ) ಮಲ್ಲಿನಾಥನು ತೋರಿದ ನಿಜರೂಪವನ್ನು ವರ್ಣಿಸಿರಿ.

ಅಥವಾ

(ಆ) ಅಕ್ಕಮಹಾದೇವಿಯು ಗುರುವಿನ ವಿಶೇಷತೆಯನ್ನು ತನ್ನ ವಚನಗಳಲ್ಲಿ ಹೇಗೆ ಬಿಂಬಿಸಿದ್ದಾಳೆ ?

40. ನಿಮ್ಮ ಊರಿಗೆ ರಸ್ತೆ ಸೌಕರ್ಯವನ್ನು ಒದಗಿಸಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗೆ ಅರ್ಜಿ ಬರೆಯಿರಿ.

41. **"ಬೆಳೆವ ಸಿರಿ ಮೊಳಕೆಯಲ್ಲಿ"** – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

42. (ಅ) ಕುರುಡನೊಬ್ಬ ಕೋಲು ಹಿಡಿದು ದಿಕ್ಕು ತೋಚದೆ ಕಂಗಾಲಾಗಿ ರಸ್ತೆಯನ್ನು ದಾಟಲೂ ಆಗದೆ, ರಸ್ತೆ ಬದಿಯಲ್ಲಿ ನಿಂತಿರುತ್ತಾನೆ. ಅದೇ ಸಮಯಕ್ಕೆ ವಿದ್ಯಾರ್ಥಿಯೊಬ್ಬ ಅದೇ ಮಾರ್ಗವಾಗಿ ಬರುತ್ತಾನೆ.....ದಡ ಸೇರಿಸುತ್ತಾನೆ.

ಈ ಕತೆಯನ್ನು ಪೂರ್ಣಗೊಳಿಸಿ. ಸೂಕ್ತ ಶೀರ್ಷಿಕೆಯನ್ನು ಬರೆಯಿರಿ.

ಅಥವಾ

(ಆ) ಈ ಆಂಗ್ಲ ಗಾದೆಗಳಿಗೆ ಸರಿಹೊಂದುವ ಕನ್ನಡ ಗಾದೆ ಮಾತನ್ನು ಬರೆಯಿರಿ.

(i) Health is Wealth.

(ii) Sound mind in a Sound body.

(iii) All that glitters is not gold.

(iv) The pen is mightier than the sword.

(v) Prevention is better than cure.

docs.aglasem.com

aglasem.com

ಭಾಗ - V

(24 ಅಂಕಗಳು) 3x8=24

43. (ಅ) ಅಷ್ಟವಂಕನ ರೂಪವನ್ನು ಗೆಳತಿಯ ಮಾತುಗಳಲ್ಲಿ ಬಣ್ಣಿಸಿ.

ಅಥವಾ

(ಆ) ಸ್ತ್ರೀ–ಪುರುಷ ಸಮಾನತೆ ಮತ್ತು ಏಕದೇವೋಪಾಸನೆಗಳ ಬಗ್ಗೆ ಬಸವಣ್ಣನವರ ಅಭಿಪ್ರಾಯವೇನು ?

44. (ಅ) ರೋಮ್ ನಗರದಲ್ಲಿ ಲೇಖಕರಿಗಾದ ಮಳೆಯ ಅನುಭವವನ್ನು ಚಿತ್ರಿಸಿ.

ಅಥವಾ

(ಆ) ಬಾಲ್ಯದಲ್ಲಿ ಮನಸೂರರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಸಂಗೀತ ಪರಿಸರವನ್ನು ವಿವರಿಸಿ.

45. ಕೊಟ್ಟಿರುವ ವಿಷಯಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪ್ರಬಂಧವನ್ನು ಬರೆಯಿರಿ.

(ಅ) ವಾಯುಮಾಲಿನ್ಯ

(ಆ) ಕೋವಿಡ್–19

- o O o -

docs.aglasem.com

aglasem.com

TN SSLC 2022 Question Paper

No. of Printed Pages : **6**

6143

Register Number

Language – Part IV – KANNADA

Time Allowed : 3.00 Hours] [Maximum Marks : 100

ಸೂಚನೆಗಳು : (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿರಿ.

(2) ಉತ್ತರವನ್ನು ಬರೆಯಲು **ಕಪ್ಪು** ಅಥವಾ **ನೀಲಿ** ಶಾಯಿಯನ್ನು ಉಪಯೋಗಿಸಿರಿ.

ಭಾಗ - I

(15 ಅಂಕಗಳು)

ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **15x1=15**

Choose and write the **correct** answer.

1. 'ಅಂಬರ' ಪದದ ಅರ್ಥ _____.

(ಅ) ಆಕಾಶ (ಆ) ಸೂರ್ಯ (ಇ) ಚಂದ್ರ (ಈ) ಭೂಮಿ

2. 'ಪುರಾತನ' ಈ ಪದದ ವಿರುದ್ಧಾರ್ಥ _____.

(ಅ) ಹಳೆಯ (ಆ) ಪ್ರಾಚೀನ (ಇ) ನವೀನ (ಈ) ಹಿಂದಿನ

3. 'ಕಾವ್ಯ' ಈ ಪದದ ತದ್ಭವ ರೂಪ _____.

(ಅ) ಕವಿ (ಆ) ಕಬ್ಬ (ಇ) ಕವಿತೆ (ಈ) ಕಾರ್ಯ

4. 'ಗಂಗೆ' ಈ ಶಬ್ದದಲ್ಲಿನ ಲಿಂಗ _____.

(ಅ) ಪುಲ್ಲಿಂಗ (ಆ) ಸ್ತ್ರೀಲಿಂಗ (ಇ) ನಪುಂಸಕಲಿಂಗ (ಈ) ಪುನ್ನಪುಂಸಕ ಲಿಂಗ

5. 'ತಾಯಿ' ಈ ಪದದಲ್ಲಿರುವ ವಚನ _____.

(ಅ) ಏಕವಚನ (ಆ) ಬಹುವಚನ (ಇ) ದ್ವಿವಚನ (ಈ) ಯಾವುದೂ ಇಲ್ಲ

6. ರಾಘವಾಂಕ ಕವಿಯು _____ ರವರ ಸೋದರಳಿಯ ಹಾಗೂ ಶಿಷ್ಯ.

(ಅ) ಕುಮಾರವ್ಯಾಸ (ಆ) ಹರಿಹರ (ಇ) ಆಂಡಯ್ಯ (ಈ) ಪುರಂದರದಾಸ

[Turn over

docs.aglasem.com

aglasem.com

7. 'ಶಾಲೆಗೆ' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ _____.

(ಅ) ಪ್ರಥಮ (ಆ) ತೃತೀಯ (ಇ) ಚತುರ್ಥಿ (ಈ) ಸಪ್ತಮಿ

8. 'ರಾಮನಾಥ' ಇದು ಯಾವ ವಚನಕಾರರ ಅಂಕಿತವಾಗಿದೆ ?

(ಅ) ಬಸವಣ್ಣ (ಆ) ದೇವರ ದಾಸಿಮಯ್ಯ

(ಇ) ಅಲ್ಲಮಪ್ರಭು (ಈ) ಅಕ್ಕಮಹಾದೇವಿ

9. 'ಸಾಹಸ ಭೀಮ ವಿಜಯಂ, ಕಾವ್ಯದ ಕರ್ತೃ _____.

(ಅ) ಪಂಪ (ಆ) ರನ್ನ (ಇ) ಪೊನ್ನ (ಈ) ಜನ್ನ

10. 'ದಿಗಂತ' ಇದು _____ ಸಂಧಿಗೆ ಉದಾಹರಣೆಯಾಗಿದೆ.

(ಅ) ಲೋಪ ಸಂಧಿ (ಆ) ಆದೇಶ ಸಂಧಿ (ಇ) ಗುಣ ಸಂಧಿ (ಈ) ಜಶ್ತ್ವ ಸಂಧಿ

11. 'ಕಣ್ಮುಚ್ಚಿ' ಈ ಪದದಲ್ಲಿರುವ ಸಮಾಸ _____.

(ಅ) ತತ್ಪುರುಷ ಸಮಾಸ (ಆ) ಕರ್ಮಧಾರಯ ಸಮಾಸ

(ಇ) ಕ್ರಿಯಾ ಸಮಾಸ (ಈ) ದ್ವಂದ್ವ ಸಮಾಸ

12. ಕಂದ ಪದ್ಯದಲ್ಲಿ ಒಟ್ಟು _____ ಮಾತ್ರೆಗಳಿವೆ.

(ಅ) 20 (ಆ) 32 (ಇ) 64 (ಈ) 72

13. ಕನ್ನಡದ ಪ್ರಥಮ ರಾಷ್ಟ್ರಕವಿ _____.

(ಅ) ಗೋವಿಂದ ಪೈ (ಆ) ಬಿ.ಎಂ.ಶ್ರೀ.

(ಇ) ಕುವೆಂಪು (ಈ) ಯು.ಆರ್. ಅನಂತಮೂರ್ತಿ

14. ಅಭಯರುಚಿ ಮತ್ತು ಅಭಯಮತಿಯರ ಗುರುಗಳು _____.

(ಅ) ಅಜಿತಸೇನಾಚಾರ್ಯ (ಆ) ಸುದಾತ್ತಾಚಾರ್ಯ

(ಇ) ಯಶೋಧರ (ಈ) ಮಾರಿದತ್ತ

15. ಡಾ॥ ಗೋಪಾಲ ಕೃಷ್ಣ ಅಡಿಗರ _____ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

(ಅ) ಭಾವತರಂಗ (ಆ) ಭೂಮಿಗೀತ (ಇ) ವರ್ಧಮಾನ (ಈ) ಮಣ್ಣಿನ ವಾಸನೆ

docs.aglasem.com

aglasem.com

TN SSLC 2022 Question Paper

ಭಾಗ - II

(18 ಅಂಕಗಳು)

ವಿಭಾಗ - 1

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಉತ್ತರಿಸಿ. **4x2=8**

Answer **any four** questions.

16. ಹ್ಯೂಯಾನ್‌ತ್ಸಾಂಗ್ ಯಾರು ? ಆತ ಕನ್ನಡಿಗರ ಬಗ್ಗೆ ಏನು ಹೇಳಿದ್ದಾನೆ ?

17. ಅತ್ಯಂತ ಪ್ರಾಚೀನ ಭಾರತೀಯ ಸಂಗೀತ ಪ್ರಕಾರ ಯಾವುದು ?

18. ಗಿಳಿಗಳು ಏನೆಂದು ಉಲಿಯುತ್ತಿದ್ದವು ?

19. ಬಸವಣ್ಣನವರ ಅಭಿಪ್ರಾಯದಲ್ಲಿ ಕುಲಜರು ಎಂದರೆ ಯಾರು ?

20. ಹುಡುಗನು ತಾಯಿಯನ್ನು ತಬ್ಬಿಕೊಳ್ಳಲು ಹೋದಾಗ ಆಕೆ ಏನು ಮಾಡಿದಳು ?

21. ಸಂಪರ್ಕ, ರೋಮಾಂಚನ – ಈ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿ.

ವಿಭಾಗ - 2

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ಐದಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿ. **5x2=10**

Answer **any five** questions briefly.

22. 'ಬಿದ್ದವನನ್ನು ಹೊಡೆಯೆನು' ಎಂದು ದುರ್ಯೋಧನನು ಏನು ಮಾಡಿದನು ?

23. ಸಿದ್ಧರಾಮನು ಹೇಳಿದ ಮಲ್ಲಯ್ಯನ ಕುರುಹುಗಳು ಯಾವುವು ?

24. ಹೇಮಂತ ಋತು ಬರುವಾಗ ಇಳೆ ಹೇಗಿರುತ್ತದೆ ?

25. ಅಲ್ಲಮಪ್ರಭು ಲೋಕವು ಯಾವುದಕ್ಕಾಗಿ ಸತ್ತಿತೆಂದು ಹೇಳುತ್ತಾನೆ ?

26. ಕವಿ ಅಡಿಗರು ಯಾವ ಗುಹೆಯಿಂದ ಹೊರಬರುವಂತೆ ಯುವಕರನ್ನು ಕೇಳಿದ್ದಾರೆ ?

27. ಪ್ರೇಮಾಗ್ನಿ, ಒಮ್ಮತ – ಈ ಪದಗಳನ್ನು ಬಿಡಿಸಿ ಸಮಾಸವನ್ನು ಹೆಸರಿಸಿ.

28. ಸರ್ವಾಂಗ, ಗುಹೇಶ್ವರ – ಈ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ತಿಳಿಸಿ.

docs.aglasem.com
aglasem.com

TN SSLC 2022 Question Paper

ಭಾಗ - III

(18 ಅಂಕಗಳು)

ಕೊಟ್ಟಿರುವ ಪ್ರಶ್ನೆಗಳಲ್ಲಿ ಪ್ರತಿ ವಿಭಾಗದಿಂದ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿ. (**34** ನೇ ಪ್ರಶ್ನೆ **ಕಡ್ಡಾಯ**).

Answer **any two** questions from each section. (Question No. **34** is **compulsory**).

ವಿಭಾಗ - 1 **2x3=6**

29. ನಿಜವಾದ ವ್ಯಾಸಂಗ ಹೇಗಿರಬೇಕೆಂದು ಲೇಖಕರು ಹೇಳುತ್ತಾರೆ ?

30. ದೇವಾಲಯಗಳ ನಿರ್ಮಾಣದ ಬಗೆಗೆ ಬಸವಣ್ಣನವರ ವಿಚಾರಗಳಾವುವು ?

31. ಜಿ.ಪಿ. ರಾಜರತ್ನಂ ಅವರು ಕನ್ನಡವನ್ನು ಹೇಗೆ ವರ್ಣಿಸಿದ್ದಾರೆ ?

ವಿಭಾಗ - 2 **2x3=6**

32. ಸೋತು ಬಿದ್ದಿರುವ ದುರ್ಯೋಧನನನ್ನು ಕಂಡು ಭೀಮನು ಏನು ಮಾಡಿದನು ?

33. 'ನವ ವಿಧಾತರು' ಎಂಬ ಪದವನ್ನು ಅಡಿಗರು ಹೇಗೆ ಸಮರ್ಥಿಸಿಕೊಂಡಿದ್ದಾರೆ ?

34. ಈ ಪದ್ಯಭಾಗವನ್ನು ಪೂರ್ತಿಗೊಳಿಸಿ.

(ಅ) ಚೆಂಗುಡಿಯ ಸಿಂಗರದ.....

..... ದೀನರೆಂದೆನಿಸಿ.

ಅಥವಾ

(ಆ) ಅಜ್ಞಾನವೆಂಬ ತೊಟ್ಟಿಲೊಳಗೆ.....

..... ಲಿಂಗವ ಕಾಣಬಾರದು.

ವಿಭಾಗ - 3 **2x3=6**

35. ಭೋಗ ಷಟ್ಪದಿ ಎಂದರೇನು ? ಉದಾಹರಣೆ ಕೊಡಿ.

36. ಉತ್ಪ್ರೇಕ್ಷಾಲಂಕಾರ ಎಂದರೇನು ? ಉದಾಹರಣೆ ಕೊಡಿ.

37. 'ಕರೆದಡೇ ಕೋಯೆನ್ನೆ ಮಲ್ಲಯ್ಯ ಬೆಂಬತ್ತಿ
ಹರಿದೆಡೇ ಕೋ ಯೆನ್ನೆ ಮಲ್ಲಯ್ಯ'
ಈ ಪದ್ಯಕ್ಕೆ ಪ್ರಸ್ತಾರ ಹಾಕಿರಿ.

docs.aglasem.com

aglasem.com

TN SSLC 2022 Question Paper

ಭಾಗ – IV

(25 ಅಂಕಗಳು)

ಕೊಟ್ಟಿರುವ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿ. **5x5=25**

Answer **all** the questions.

38. (ಅ) ಬಿ.ಎಂ.ಶ್ರೀ.ಯವರು ಕನ್ನಡ ನಾಡು ನುಡಿಯ ಬಗ್ಗೆ ಹೇಗೆ ವಿವರಿಸಿದ್ದಾರೆ ?

ಅಥವಾ

(ಆ) ಅಜ್ಜ ಮತ್ತು ಬೂಟ್ ಪಾಲಿಶ್ ಹುಡುಗನ ಸಂಬಂಧವನ್ನು ವಿವರಿಸಿ.

39. (ಅ) 'ಕಂಡು ಬೆಱಗಾದರಾ ಪುಣ್ಯದಂಪತಿಗಳು' ಏಕೆ ?

ಅಥವಾ

(ಆ) ಕನ್ನಡ ನಾಡಿನ ಕವಿ ಹಾಗೂ ಕಲೆಯ ಮಹತ್ವವೇನು ? ವಿವರಿಸಿ.

40. ನಿಮ್ಮ ಗ್ರಾಮಕ್ಕೆ ಗ್ರಂಥಾಲಯವನ್ನು ಒದಗಿಸಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಬರೆಯಿರಿ.

41. 'ಕೈ ಕೆಸರಾದರೆ ಬಾಯಿ ಮೊಸರು' ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

42. (ಅ) ನದಿಯ ನೀರಿನಲ್ಲಿ ಒಂದು ಇರುವೆಯು ಮುಳುಗಿ ಸಾಯುವ ಸ್ಥಿತಿಯಲ್ಲಿತ್ತು. ಇದನ್ನು ಆ ನದಿಯ ದಡದಲ್ಲಿದ್ದ ಮರದ ಮೇಲೆ ಕುಳಿತಿದ್ದ ಪಾರಿವಾಳ ನೋಡಿತು.....

ಈ ಕತೆಯನ್ನು ಪೂರ್ಣಗೊಳಿಸಿ. ಸೂಕ್ತ ಶೀರ್ಷಿಕೆಯನ್ನು ಬರೆಯಿರಿ.

ಅಥವಾ

(ಆ) ಈ ಆಂಗ್ಲ ಗಾದೆಗಳಿಗೆ ಸರಿಹೊಂದುವ ಕನ್ನಡ ಗಾದೆ ಮಾತನ್ನು ಬರೆಯಿರಿ.

(i) Work is Worship.

(ii) Prevention is better than cure.

(iii) Honesty is the best policy.

(iv) Knowledge is power.

(v) Where there is a will, there is a way.

docs.aglasem.com

aglasem.com

TN SSLC 2022 Question Paper

ಭಾಗ - V

(24 ಅಂಕಗಳು) 3x8=24

43. (ಅ) ಭಾರತೀಯ ಸಾಹಿತ್ಯದ ಬಗ್ಗೆ ವಿವರಿಸಿ.

ಅಥವಾ

(ಆ) ಮಾರಿಯ ಗುಡಿ ಹೇಗಿತ್ತು ? ವರ್ಣಿಸಿರಿ.

44. (ಅ) ಸುಂದರಿಯು ತನ್ನ ಮನೆಯಿಂದ ಹಿಂದಿರುಗಿ ಕಾಡಿಗೆ ಹೋಗಲು ಕಾರಣವೇನು ?

ಅಥವಾ

(ಆ) ಬಾಲ್ಯದಲ್ಲಿ ಮನಸೂರರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಸಂಗೀತ ಪರಿಸರವನ್ನು ವಿವರಿಸಿ.

45. ಕೊಟ್ಟಿರುವ ವಿಷಯಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪ್ರಬಂಧವನ್ನು ಬರೆಯಿರಿ.

(ಅ) ಜಲಮಾಲಿನ್ಯ

(ಆ) ಅನೇಕತೆಯಲ್ಲಿ ಏಕತೆ

- o O o -

docs.aglasem.com

aglasem.com